

ದೋಣಿಯು ಸಾಕಷ್ಟು ದೂರ
ಹೋಗಿದ್ದರಿಂದ ಕಪ್ಪೆಗೆ
ಅದನ್ನು ಮುಟ್ಟಲು
ಏಕಲವ್ಯ ಪ್ರಕಾಶನ

# ರುಸಿ ಮತ್ತು ಪುಸಿ

ಚಿತ್ರ ಮತ್ತು ಕತೆ
ವ್ಹಿ ಸುತೆಎವ್ಹ



ಏಕಲವ್ಯ ಪ್ರಕಾಶನ

ರುಸಿ ಮತ್ತು ಪುಸಿ

rusi mattu pusi


A picture story

From *STORIES AND PICTURES*
Progress Publishers, MOSCOW
Kannada Translation: Prabhakar Nanawaty


This Kannada translation is supported by the Parag Initiative of Tata Trusts.

May 2018 / 1000 copies
Paper: 100 gsm Maplitho and 210 gsm Art card (cover)
ISBN: 978-93-85236-61-7
Price: ₹ 57.00

Published by:
**EKLAVYA**
E-10, Shankar Nagar BDA Colony
Shivaji Nagar, Bhopal- 462 016
Phone: +91 755 255 0976, 267 1017
www.eklavya.in / books@eklavya.in



Printed at: R.K. Secuprint P Ltd., Bhopal, Phone +91 755 2687 589




# ರುಸಿ ಮತ್ತು ಪುಸಿ




ರುಸಿ ಎಂಬ ಹುಡುಗಿಯ ಹತ್ತಿರ ಪುಸಿ ಎಂಬ ಸಾಕಿದ ಬೆಕ್ಕು ಇತ್ತು.

ಅವರಿಬ್ಬರಲ್ಲಿ ಸಾಕಷ್ಟು ಗೆಳೆತನವಿತ್ತು.






ಒಂದು ದಿನ ರುಸಿ ಟೇಬಲ್ಲಿನ
ಬಳಿ ಕುಳಿತು ಚಿತ್ರವನ್ನು
ತೆಗೆಯುತ್ತಿದ್ದಳು.




“ನೀನೇನು ಮಾಡುತ್ತಿರುವಿ?”
ಪುಸಿ ಕೇಳಿತು.
“ನಾನು ಮನೆಯ ಚಿತ್ರವನ್ನು
ತೆಗೆಯುತ್ತಿದ್ದೇನೆ.
ನೋಡಿಲ್ಲಿ. ಇದು ಛಪ್ಪರ, ಇದು
ಹೊಗೆಕೊಳವಿ. ಇದು ಬಾಗಿಲು.”







“ನಾನು ಅಲ್ಲಿ ಏನು
ಮಾಡಬಹುದು?”
“ನೀನು ಸ್ಟೋವ್ವ ಹೊತ್ತಿಸಿ ಅಂಬಲಿ
ಮಾಡಬಹುದು.”
ಆ ಮೇಲೆ ರುಸಿ
ಹೊಗೆಕೊಳವೆಯಿಂದ ಹೊಗೆ
ಹೊರಬರುತ್ತಿರುವ ಚಿತ್ರವನ್ನು
ಸೇರಿಸಿದಳು.




“ಆದರೆ ಕಿಟಕಿಗಳೆಲ್ಲಿ? ಬೆಕ್ಕುಗಳು ಯಾವಾಗಲು ಕಿಟಕಿಯಿಂದ ಜಿಗಿಯುತ್ತವೆ.”

“ಇವು ಕಿಟಕಿಗಳು. ಒಂದು, ಎರಡು, ಮೂರು, ನಾಲ್ಕು.”

ರುಸಿ ನಾಲ್ಕು ಕಿಟಕಿಯ ಚಿತ್ರಗಳನ್ನು ಬರೆದಳು.


“ಆದರೆ ನಾನು ತಿರುಗಾಡಲು ಎಲ್ಲಿಗೆ ಹೋಗಲಿ?”





“ಇಲ್ಲಿ ಹೋಗಬಹುದು.”
ಮನೆಯ ಸುತ್ತಲು ಅವಳು
ಬೇಲಿಯ ಚಿತ್ರವನ್ನು ತೆಗೆದಳು.
“ಇದು ನಮ್ಮ ತೋಟ.” ಅವಳು
ಹೇಳಿದಳು.
ಪುಸಿ ಅದನ್ನೊಮ್ಮೆ ಮೂಸಿ
ನೋಡಿತು.
“ಇದೆಂಥ ತೋಟ?
ಇಲ್ಲಿ ಏನೂ ಬೆಳೆದಿಲ್ಲವಲ್ಲ!”






“ಸ್ವಲ್ಪ ತಡೆ. ಇಲ್ಲಿ ಹೂವಿನ ತೋಟವಿದೆ. ಮತ್ತು ಇಲ್ಲಿ ಕಿತ್ತಳೆ ಗಿಡವಿದೆ. ಗಿಡದಲ್ಲಿ ಕಾಯಿಗಳಿವೆ. ಇದು ಪಲ್ಲೆಯ ತೋಟ. ಇಲ್ಲಿ ಗಜ್ಜರೆ ಮತ್ತು ಕ್ಯಾಬೀಜುಗಳು ಇವೆ.” ರುಸಿ ಹೇಳತೊಡಗಿದಳು.



“ಕ್ಯಾಬೀಜು..!”. ಮಾರಿ ಸೊಟ್ಟು ಮಾಡುತ್ತ ಪುಸಿ ಕೇಳಿತು. “ಆದರೆ ನಾನು ಮೀನುಗಳನ್ನು ಹೇಗೆ ಹಿಡಿಯಲಿ?”





“ಅದು ಇಲ್ಲಿ” ಎಂದೆನ್ನುತ್ತ ರುಸಿ
ಒಂದು ನೀರಿನ ಕೊಳದ ಚಿತ್ರವನ್ನು
ತೆಗೆದಳು. ಮತ್ತು ಅದರಲ್ಲಿ ಮೂರು
ಮೀನುಗಳ ಚಿತ್ರ ಕೂಡ!
“ಇದು ಸರಿ... ಮತ್ತು ಅಲ್ಲಿ
ಹಕ್ಕಿಗಳಿವೆಯೇ? ನನಗೆ ಹಕ್ಕಿಗಳು
ಬಹು ಇಷ್ಟ.” ಪುಸಿ ಹೇಳತೊಡಗಿತು.



“ಹಕ್ಕಿಗಳಿವೆ. ಇದು ಕೋಳಿ ಮತ್ತು ಇದು ಹುಂಜ. ಇದು ಬಾತುಕೋಳಿ.
ಇವು ಮೂರು ಕೋಳಿಮರಿಗಳು.”
ಪುಸಿ ಜೊಲ್ಲು ಸೋರುತ್ತ ತುಟಿ ಒರೆಸಿಕೊಂಡಿತು. “ಮತ್ತು...
ಸರಿ...ಅಲ್ಲಿ.. ಅಲ್ಲಿ ಇಲಿಗಳು ಇವೆಯೇ?”







"ಇಲ್ಲ. ಇಲ್ಲಿ ಇಲಿಗಳಿಲ್ಲ."
"ಆದರೆ ಮನೆಯನ್ನು ಯಾರು ಕಾಯುವರು?"
"ಇದಿಲ್ಲಿ." ರುಸಿ ನಾಯಿ ಮನೆ ಚಿತ್ರ ತೆಗೆದಳು.
"ಈ ನಾಯಿ ನಿನ್ನ ಮನೆ ಕಾಯುವದೇ!"

ಪುಸಿ ತನ್ನ ಬಾಲವನ್ನು ಸೆಟೆಸಿ, ಮೈಮೇಲಿನ ತುಪ್ಪಳವನ್ನು ನೇರಗೊಳಿಸಿ ಎದ್ದು ನಿಂತಿತು. "ನಿನ್ನ ಈ ಮನೆಯಲ್ಲಿ ನಾನಿರಲಾರೆ." ಎಂದು ಪುಸಿ ಹೇಳಿತು.

ಅದರ ಮನ ನೊಂದಿದ್ದರಿಂದ ಸಿಟ್ಟಿಗೆದ್ದು ಹೊರಬಿತ್ತು.

ರುಸಿ ಮತ್ತು ಪುಸಿ ಮತ್ತೇ ಗೆಳೆಯರಾಗಬಹುದೇ?

ನಿಮಗೆ ಏನು ಅನ್ನಿಸುತ್ತೇ?



ಒಂದು ದಿನ ರುಸಿಯು ಪುಸಿಗಾಗಿ ಒಂದು ಮನೆಯ ಚಿತ್ರವನ್ನು ಬರೆಯುತ್ತಿದ್ದಳು.

ಅದರಲ್ಲಿ ತನಗೆ ಬೇಕಾಗುವ ಎಲ್ಲ ವಸ್ತುಗಳನ್ನು ಚಿತ್ರಿಸಿದಳು.

ಆ ಮೇಲೆ ಏನಾಯಿತು?

ಪುಸಿ ಆ ಮನೆಯಲ್ಲಿ ಇರತೊಡಗಿತೇ?



ಏಕಲವ್ಯ ಪ್ರಕಾಶನ

parag
AN INITIATIVE OF TATA TRUSTS

Price: ₹ 57.00

9 789385 236617